### ಇಂದು ರಾಷ್ಟ್ರೀಯ ವಿಜ್ಞಾನ ದಿನ

# ವಿಜ್ಞಾನ ಲೋಕದ ತಾರೆಯರು

## ಭಾರತೀಯ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು

ಮಿಕ್ಸಿ ಕಂಡು ಹಿಡಿದದ್ದು ಪುರುಷ. ಆದರೆ ಅದನ್ನು ಬಳಸುವುದು ಮಹಿಳೆ. ಹೀಗೆ ಯಾವುದೇ ವಿಜ್ಞಾನ, ತಂತ್ರಜ್ಞಾನದ ಆವಿಷ್ಕಾರವೆಂದರೆ ಅದು ಪುರುಷ ಮಾತ್ರ ಎಂಬಂಥ ಕಾಲವಿತ್ತು. ಆದರೆ ಅಂಥ ಕಾಲದಿಂದ ಇಂದಿನ ಕಾಲದವರೆಗೂ ಮಹಿಳೆಯರು ವಿಜ್ಞಾನ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಮಾಡಿ ಸೈ ಎನಿಸಿಕೊಂಡಿದ್ದಾರೆ. ಅದು ಭೌತವಿಜ್ಞಾನದಿಂದ ಹಿಡಿದು, ಸಮುದ್ರ ವಿಜ್ಞಾನದವರೆಗೆ, ದ್ರವ ವಿಜ್ಞಾನದಿಂದ ಆಕಾಶ ಕಾಯದವರೆಗೆ ವಿಜ್ಞಾನ ಕ್ಷೇತ್ರದ ಬೇರೆಬೇರೆ ವಿಭಾಗಗಳಲ್ಲಿ ಗಮನಾರ್ಹವಾದ ಸಾಧನೆಗೈದವರಿದ್ದಾರೆ. ಎಲೆಮರೆಯ ಕಾಯಿಯಂತೆ ಕೆಲಸ ಮಾಡುತ್ತಿರುವ ಇಂಥ ಮಹಿಳಾ ವಿಜ್ಞಾನಿಗಳ ಕುರಿತೊಂದು ವಿವರ.

ಸುಮಂಗಲಾ ಎಸ್.ಮುಮ್ಮಿಗಟ್ಟಿ



ನಾನಂದು ಬೆಂಗಳೂರಿನ ಪ್ರತಿಷ್ಠಿತ ಶಾಲೆಯೊಂದರ ತರಗತಿಯಲ್ಲಿ ನಿಂತಿದ್ದೆ, ನಲವತ್ತು ಹುಡುಗಿಯರಿದ್ದ ಆ ತರಗತಿಯಲ್ಲಿ ಜೀವಂತಿಕೆ ಪುಟಿಯುತ್ತಿತ್ತು. ನಿಮ್ಮ ನಿಮ್ಮ ಅನಿಸಿಕೆಯಲ್ಲಿ ಭಾರತೀಯ ವಿಜ್ಞಾನಿಯೊಬ್ಬರ ಚಿತ್ರಣವನ್ನು ಹೇಳಿ ಎಂದಾಗ, ಬಹುತೇಕ ಎಲ್ಲರೂ ಬಿಳಿಯ ಕೋಟಿನ, ಕೆದರಿದ ತಲೆಯ, ಗಡ್ಡಧಾರಿಯಾದ, ದಪ್ಪ ಕನ್ನಡಕದ ಪುರುಷನ ಚಿತ್ರಣವನ್ನು ಕೊಟ್ಟರು, ಯಾಕೆ? ವಿಜ್ಞಾನಿ ಎಂದಾಗ ನಿಮಗ್ಯಾರಿಗೂ ಮಹಿಳೆಯ ಚಿತ್ರ ಕಣ್ಣ ಮುಂದೆ ಬರಲಿಲ್ಲವೆ ಎಂದೆ ? ಹೌದಲ್ಲಾ... ಎಂದು ಅವರೇ ಅಚ್ಚರಿ ಪಟ್ಟುಕೊಂಡರು.

ಸ್ವತಂತ್ರ ಭಾರತದ ಏಳನೆಯ ದಶಕದಲ್ಲಿ ನಾವಿರುವ ಈ ಅವಧಿಯಲ್ಲೂ ವಿಜ್ಞಾನಿ ಎಂದೊಡನೆ ಪುರುಷನೊಬ್ಬನ ಚಿತ್ರ ಕಣ್ಮುಂದೆ ಬರುವುದಾದರೆ ವಿಜ್ಞಾನ -ತಂತ್ರಜ್ಞಾನ ಕ್ಷೇತ್ರಕ್ಕೆ ಮಹಿಳೆಯರ ಕೊಡುಗೆ ಇಲ್ಲವೇ? ಎಂಬ ಪ್ರಶ್ನೆ ಕಾಡುತ್ತದೆ. ಇದಕ್ಕೆ ಉತ್ತರವನ್ನು ಹುಡುಕುತ್ತಾ ಹೊರಟಾಗ ನೀಲ ನಭದಲ್ಲಿ ಬೆಳಗುವ ನಕ್ಷತ್ರಗಳಂತೆ ಹಲವಾರು ಮಹಿಳಾ ವಿಜ್ಞಾನಿಗಳು ನಮಗೆ ಕಂಡುಬರುತ್ತಾರೆ. ಅವರ ಸಾಧನೆಯ ಹಿರಿಮೆಯೂ ಯಾವುದೇ ಪುರುಷನ ಸಾಧನೆಗಿಂತ ಕಡಿಮೆಯೇನಿಲ್ಲ. ಇತ್ತೀಚೆಗಷ್ಟೇ ಇಸ್ರೋದ ದಾಖಲೆಯ ಉಡಾವಣೆಯ ಹಿಂದೆ ಇದ್ದ ಮಹಿಳಾ ವಿಜ್ಞಾನಿಗಳ ಬಗ್ಗೆ ಇದೇ ಪುಟದಲ್ಲಿ ಕಳೆದವಾರ ಓದಿದ್ದೀರಿ. ಹಾಗಾದರೆ ಎಷ್ಟು ಸಾಧನೆಯಾಗ ಬೇಕೋ ಅಷ್ಟನ್ನು ನಮ್ಮ ಮಹಿಳೆಯರು ಮಾಡಿದ್ದಾರೆಯೇ? ಅವರಿಗೆ ಅದಕ್ಕೆ ಅವಕಾಶಗಳು ದೊರೆತವೆಯೆ? ಎಂಬ ಪರಾಮರ್ಶೆಯನ್ನು ಮಾಡಿದಾಗ ಕಂಡುಕೊಂಡ ಕೆಲ ಅಂಶಗಳು ನಿಮ್ಮ ಮುಂದಿವೆ.

ದೆಹಲಿಯ ಸಾಮಾಜಿಕ ಅಧ್ಯಯನ ಕೇಂದ್ರ 2016 ರ ನವೆಂಬರ್‌ನಲ್ಲಿ ಪ್ರಕಟಿಸಿದ ವರದಿಯ ಪ್ರಕಾರ ಮತ್ತು ವರ್ಲ್ಡ್ ಎಕನಾಮಿಕ್ ಫೋರಮ್‌ನ ಅಧ್ಯಯನದ ವರದಿಯಲ್ಲಿ ತಿಳಿಸಿರುವಂತೆ, ಭಾರತದ ಒಟ್ಟು ವೈಜ್ಞಾನಿಕ ಸಂಶೋಧಕರಲ್ಲಿ ಶೇ.14.3 ಮಾತ್ರ ಮಹಿಳೆಯರು. ಶೇಕಡ 25-30 ಡಾಕ್ಟರೇಟ್ ಗಳು ಮಹಿಳೆಯರಿಗೆ ದೊರೆತಿವೆ. ದೇಶದ ವಿಜ್ಞಾನ ಕ್ಷೇತ್ರದ ಪ್ರತಿಷ್ಠಿತ ಶಾಂತಿಸ್ವರೂಪ ಭಟ್ನಾಗರ್ ಪ್ರಶಸ್ತಿಯನ್ನು 1958ರಲ್ಲಿ ಪ್ರಾರಂಭಿಸಲಾಯಿತು. ಅಂದಿನಿಂದ ನೀಡಿರುವ 524 ಪ್ರಶಸ್ತಿಗಳಲ್ಲಿ ಕೇವಲ 16 ಪ್ರಶಸ್ತಿಗಳು ಮಹಿಳೆಯರಿಗೆ ದೊರೆತಿವೆ. ವಿಜ್ಞಾನದ ರಾಷ್ಟ್ರಮಟ್ಟದ ವಿವಿಧ ಅಕಾಡಮಿಗಳ ಫೆಲೋಶಿಪ್ ಪಡೆಯುವಲ್ಲಿ ಕೂಡ ಮಹಿಳೆಯರು ಶೇ.5ಕ್ಕಿಂತ ಕಡಿಮೆ. ಹಾಗಾದರೆ ವನಿತೆಯರು ವಿಜ್ಞಾನದ ಅಧ್ಯಯನದಲ್ಲಿ ಹಿಂದುಳಿದಿದ್ದಾರೆಯೇ? ಪ್ರತಿಬಾರಿ ಹತ್ತನೇ ಮತ್ತು ದ್ವಿತೀಯ ಪಿಯುಸಿ ಫಲಿತಾಂಶಗಳು ಬಂದಾಗ ಮೇಲುಗೈ ಸಾಧಿಸುವುದು ಬಾಲಕಿಯರೇ, ಹಾಗಾದರೆ ಅವರೆಲ್ಲ ಎಲ್ಲಿ ಹೋದರು?


ಪುಟ III ನೋಡಿ

ದೇಶದ ಪ್ರತಿಷ್ಠಿತ ಶಾಂತಿ ಸ್ವರೂಪ ಭಟ್ನಾಗರ್ ಪ್ರಶಸ್ತಿ ಇದುವರೆಗೆ ದೊರತ 524 ಒಟ್ಟು ಪ್ರಶಸ್ತಿಗಳಲ್ಲಿ 16 ಮಾತ್ರ ಈವರೆಗೆ ಮಹಿಳಾ ವಿಜ್ಞಾನಿಗಳಿಗೆ ದೊರೆತಿವೆ. ಇವರೆಲ್ಲರೂ ನಿಜಕ್ಕೂ ಅಪಾರ ಪರಿಶ್ರಮದಿಂದ ಮುಂದೆ ಬಂದವರು. ಡಾ. ವಿದಿತಾ ವೈದ್ಯಾ ಹೇಳುವಂತೆ ಭಾರತೀಯ ಮಹಿಳಾ ವಿಜ್ಞಾನಿಗಳಿಗೆ ಅವಕಾಶ ದೊರೆತಲ್ಲಿ ಅವರು ಇನ್ನೂ ಹೆಚ್ಚಿನ ಕೊಡುಗೆಯನ್ನು ದೇಶದ ಪ್ರಗತಿಗೆ ನೀಡಬಲ್ಲರು.



### ಡಾ.ಚಾರುಸಿತಾ ಚಕ್ರವರ್ತಿ

ಐ.ಐ.ಟಿ ಜೆ.ಇ.ಇ ಪರೀಕ್ಷೆಯಲ್ಲಿ ಉತ್ತಮ ಸ್ಥಾನ ಪಡೇದಿದ್ದರೂ ಕೂಡಾ ವೈಕ್ತಿಕ ಕಾರಣಗಳಿಗಾಗಿ ನನ್ನ ಐ.ಐ.ಟಿ ಕಾನ್ಪುರ ಸೇರುವ ಕನಸು ಇಡೇರಲಿಲ್ಲ ಕೊನೆಗೆ ಬಿ.ಎಸ್.ಸಿ ರಸಾಯನ ಶಾಸ್ತ್ರಕ್ಕೆ ಸೇರಿಕೊಂಡೆ ಎನ್ನುವ ಡಾ.ಚಾರುಸಿತಾ ಚಕ್ರವರ್ತಿ ವ್ಯವಸ್ಥೆಯಲ್ಲಿರುವ ಗಾಜಿನ ಗೋಡೆ ನಮ್ಮ ವಿಚಾರ ಮತ್ತು ಅಭಿವೃದ್ಧಿಪರ ಚಿಂತನೆಯಲ್ಲಿ ನುಸುಳಬಾರದು ಎನ್ನುತ್ತಾರೆ.



### ಇಂಡಿಯನ್ ವಿಮೆನ್ ಸೈಂಟಿಸ್ಟ್ ಅಸೋಸಿಯೇಷನ್

ಭಾರತದಲ್ಲಿ 1970ರಲ್ಲಿ ಕೆಲವು ಮಹಿಳಾ ವಿಜ್ಞಾನಿ ಗಳೆಲ್ಲರೂ ಸೇರಿ ಕೇವಲ ಪ್ರಯೋಗಾಲಯಗಳಲ್ಲಿ ಪ್ರಯೋಗಗಳನ್ನು ಮಾಡುತ್ತಾ ಪರಿಣಾಮದ ವರದಿಗಳನ್ನು ಪ್ರಕಟಿಸುತ್ತಾ ನಮ್ಮದೇ ದಂತ ಗೋಪುರದಲ್ಲಿ ಇದ್ದು ಬಿಟ್ಟರೆ ಸಾಲದು, ವಿಜ್ಞಾನ ಮತ್ತು ತಂತ್ರಜ್ಞಾನದ ಸಹಾಯ ದಿಂದ ಸಮಾಜದ ಒಳಿತಿಗಾಗಿ ಅದರಲ್ಲೂ ವಿಶೇಷವಾಗಿ ಹಿಂದುಳಿದ ಮಹಿಳೆಯರಿಗಾಗಿ ಏನನ್ನಾದರೂ ಮಾಡಬೇಕು ಎಂದು ಯೋಚಿಸಿ ಇಂಡಿಯನ್ ವಿಮೆನ್ ಸೈಂಟಿಸ್ಟ್ ಅಸೋಸಿಯೇಷನ್‌ನನ್ನು ಸ್ಥಾಪಿಸಿದರು. ಇದು 1973ರರ ಜೂನ್ ನಲ್ಲಿ ಅಸ್ತಿತ್ವಕ್ಕೆ ಬಂತು. ಇಂದು ಇದರ ಕೇಂದ್ರ ಕಚೇರಿ ನವಿ ಮುಂಬಯಿಯಲ್ಲಿದೆ. ರೂರ್ಕಿ,ಹೈದರಾಬಾದ ದೆಹಲಿ ಕಲ್ಪಾಕಮ್, ವಡೋದರಾ, ಲಕ್ನೋ ಮತ್ತು ಅಮರಾವತಿಯಲ್ಲಿ ಇದರ ಶಾಖೆಗಳಿವೆ.ಇದರಲ್ಲಿ 2060 ಸದಸ್ಯೆಯರಿದ್ದಾರೆ.

# ವಿಜ್ಞಾನ ಲೋಕದ ತಾರೆಯರು

ಮೊದಲ ಪುಟದಿಂದ...


ರಮಾ ಗೋವಿಂದ್ ರಾಜನ್

ಉನ್ನತ ಅಧ್ಯಯನಕ್ಕೆ ಬರಲಿಲ್ಲವೇಕೆ? ಮುಂತಾದ ಹತ್ತು ಹಲವು ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಉತ್ತರ ವನ್ನು ಕಂಡು ಕೊಳ್ಳುವ ಪ್ರಯತ್ನದಲ್ಲಿ ಕೆಲವು ಸಮಾಧಾನಕರ ವಿಷಯಗಳೂ ಇವೆ.

ಭಾರತದಲ್ಲಿ ಇಂದಿಗೂ ಉನ್ನತ ಶಿಕ್ಷಣ ಎನ್ನುವುದು ಮಹಿಳೆಯರಿಗೆ ಸುಲಭ ಸಾಧ್ಯವಲ್ಲದ ವಿಷಯ. ಬಹುತೇಕ ಕುಟುಂಬಗಳಲ್ಲಿ ಆಕೆ ಶಾಲೆಗೆ ಹೋದರೂ ಹತ್ತನೆಯ ತರಗತಿಯ ನಂತರ ಕಾಲೇಜು ಸೇರಬೇಕಾದ ಸಂದರ್ಭದಲ್ಲಿ ಮನೆಯಲ್ಲೊಂದು ಚರ್ಚೆ ನಡೆಯುತ್ತದೆ. ಬಡ ಮತ್ತು ಕೆಳ ಮಧ್ಯಮ ವರ್ಗಗಳು ಆಕೆ ಮದುವೆಯವರೆಗೆ ಓದಲಿ ಎಂದರೆ, ಇನ್ನಿತರ ವರ್ಗಗಳು, ಡಿಗ್ರಿ ಪಡೆಯಲಿ ಎನ್ನುತ್ತಾರೆ. ಕೆಲವು ಕುಟುಂಬಗಳು ಮಾತ್ರ ಆಕೆಯ ಇಚ್ಛೆಗೆ ಒತ್ತಾಸೆಯಾಗಿ ನಿಂತು ಆಕೆ ವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಅಧ್ಯಯನವನ್ನು ಕೈಗೊಳ್ಳಲು ಪ್ರೇರೇಪಿಸುತ್ತಾರೆ. ಉಳಿದಂತೆ ಇಂದು ನಾವು ಕಾಣುವ ಮಹಿಳಾ ಸಾಧಕಿಯರೆಲ್ಲರೂ  ಸ್ವಂತ ಪರಿಶ್ರಮದಿಂದ ಮುಂದೆ ಬಂದವರು.

## ದೊಡ್ಡ ಕನಸು

‘ದೊಡ್ಡ ಕನಸನ್ನು ಕಾಣಿರಿ ಆಗ ಎಲ್ಲ ಅಡೆತಡೆಗಳನ್ನು ಮೀರಿನಿಲ್ಲುವ ಶಕ್ತಿ ಬರುತ್ತದೆ’ ಎನ್ನುವ ರಮಾ ಗೋವಿಂದ ರಾಜನ್ ನನ್ನ ವೈಜ್ಞಾನಿಕ ಜೀವನದಲ್ಲಿ ಪ್ರೊ.ರೊಡ್ಡಂ ನರಸಿಂಹ ಅವರ ಪ್ರಭಾವ ಬಹಳ ಇದೆ. ಯಾವುದೆ ಬೇಧಭಾವ ಮಾಡದೆ ಗುಂಪಿನ ಅತಿಕಿರಿಯ ವಿದ್ಯಾರ್ಥಿಯೂ ಸರಿಯಿರಬಹುದು ಎನ್ನುವ ಅವರ ವಿಚಾರ ನಮಗೆ ಪ್ರೇರಣೆ ಎನ್ನುತ್ತಾರೆ. ಮಹಿಳೆಯರು ಶ್ರಮಜೀವಿಗಳು. ಅವರು ಯಾವುದೇ ಕೆಲಸ ಮಾಡುತ್ತಿರಲಿ ಸಂಪೂರ್ಣ ಶ್ರಮ ಹಾಕುತ್ತಾರೆ, ನಿಷ್ಠೆಯಿಂದ ದುಡಿಯುತ್ತಾರೆ ಎನ್ನುವ ಈಕೆ ಹೈದರಾಬಾದಿನ ಫ್ಲೂಯಿಡ್ ಮೆಕ್ಯಾನಿಕ್ಸ್ ವಿಭಾಗದ ಹಿರಿಯ ವಿಜ್ಞಾನಿ. ದ್ರವ ವಿಜ್ಞಾನದಲ್ಲಿ ವಿಶೇಷತೆಯನ್ನು ಹೊಂದಿರುವ ರಮಾ ಗೋವಿಂದರಾಜನ್  2007ರ ಶಾಂತಿ ಭಟ್ನಾಗರ್ ಪ್ರಶಸ್ತಿಯನ್ನು ಪಡೆದರು. ಕೆಮಿಕಲ್ ಇಂಜಿನಿಯರಿಂಗ್ ನಲ್ಲಿ ಬಿಟೆಕ್, ಎಮ್‌ಟೆಕ್‌ಗಳನ್ನು ಪಡೆದ ಇವರು ಏರೋಸ್ಪೇಸ್ ಇಂಜಿನಿಯರಿಂಗ್ ಮೇಲೆ ಪಿಎಚ್‌ಡಿಯನ್ನುಪಡೆದರು.

## ಗಾಜಿನಗೋಡೆ!

ಇಂದಿಗೂ ಕೂಡ ಪರಿಸ್ಥಿತಿ ತೀರಾ ಭಿನ್ನವಾಗಿಲ್ಲ.

**2010 INSA-IAS ವರದಿಯ ಪ್ರಕಾರ, ಶೇ.14.1 ಮಹಿಳಾ ವಿಜ್ಞಾನಿಗಳು ಅವಿವಾಹಿತರು. ಶೇ.46.8 ಮಹಿಳಾ ವಿಜ್ಞಾನಿಗಳು ವಾರಕ್ಕೆ 40 ರಿಂದ 66 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಶೇ.19ರಷ್ಟು ಪುರುಷ ವಿಜ್ಞಾನಿಗಳ ಪತ್ನಿಯರು ವಿಜ್ಞಾನಿಗಳಾದರೆ, ಶೇ.40ರಷ್ಟು ವಿವಾಹಿತ ಮಹಿಳೆಯರು ವಿಜ್ಞಾನಿ ಪತಿಯನ್ನು ಹೊಂದಿದ್ದಾರೆ.**

ಆಕೆ ಮನೆಯ ಕೆಲಸಗಳನ್ನು ತಾನೇ ಮಾಡ ಬೇಕಿಲ್ಲವಾದರೂ ಅವು ಆಗುವಂತೆ ಮಾಡುವುದು ಆಕೆಯ ಜವಾಬ್ದಾರಿ. ಅವೆಲ್ಲವನ್ನೂ ಮೀರಿ ಆಕೆ ಕೆಲಸದ ಸ್ಥಳದಲ್ಲಿ ಪ್ರಗತಿಯನ್ನು ಸಾಧಿಸುತ್ತಿದ್ದಲ್ಲಿ ಸಹೋದ್ಯೋಗಿಗಳಿಂದ ಸಂಪೂರ್ಣ ಸಹಕಾರ ದೊರೆಯುತ್ತದೆ ಎನ್ನುವಂತಿಲ್ಲ. ಯಾವುದೆ ವಿದೇಶಿ ತರಬೇತಿ ಇದ್ದಾಗ, ಮೀಟಿಂಗ್‌ಗಳು ಬಂದಾಗ ಆಕೆ ಮಹಿಳೆ ಎಂಬ ಒಂದೇ ಕಾರಣಕ್ಕೆ ಅದು ಕೈ ತಪ್ಪಿ ಹೋಗಬಹುದು. ಅಥವಾ ಮನೆಯಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಆಕೆಯೇ ಹಿಂದೆ ಸರಿಯಬಹುದು. ಇಷ್ಟೆಲ್ಲ ಅಡೆತಡೆಗಳ ನಡುವೆಯೂ ಹಲವಾರು ಮಹಿಳಾ ಸಾಧಕಿಯರು ನಮ್ಮನಡುವೆ ಇದ್ದಾರೆ ಅವರ ಬದುಗೇ ಇಂದು ವಿಜ್ಞಾನಿಗಳಾಗಬಯಸುವ ಯುವತಿಯರಿಗೆ ಸ್ಫೂರ್ತಿ.

1940ರಲ್ಲಿ ಸರ್. ಸಿ.ವಿ. ರಾಮನ್ ಅವರೊಂದಿಗೆ ಸಂಶೋಧನೆಗೆ ಸಹಿ ಹಾಕಿದ ಅಣ್ಣಾಮಣಿ ಸ್ವತಂತ್ರವಾಗಿ 5 ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದರೂ ಪಿ.ಎಚ್.ಡಿ ಪದವಿ ಯನ್ನು ಪಡೆಯಲಾಗಲಿಲ್ಲ. ಮೆಸ್ಯಾಚುಸೆಟ್ಸ್‌ನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಅಭಾಸುರ್ ಹೇಳುವಂತೆ ಆ ಪ್ರಯೋಗ ಶಾಲೆಗಳಲ್ಲಿ ಅಂದು ಇದ್ದ ಪುರುಷ ತಾರತಮ್ಯದ ಪರಿಸ್ಥಿತಿಗಳೇ ಇದಕ್ಕೆ ಕಾರಣ. ಆದರೆ ದಿಟ್ಟ ಮಹಿಳೆ ಮಣಿ ಹಾಗೆಂದು ಸುಮ್ಮನೇ ಕೂಡಲಿಲ್ಲ. ಜೀವನ ಪೂರ್ತಿ ಅವಿವಾಹಿತಳಾಗಿಯೆ ಉಳಿದು ಭಾರತೀಯ ಹವಾಮಾನ ಇಲಾಖೆಯ ಉಪಮಹಾ ನಿರ್ದೇಶಕಿಯಾಗಿ ನಿವೃತ್ತರಾದರು. ಮದುವೆಯಾದ 16 ವರ್ಷಗಳ ನಂತರ ಗಣಿತ ಶಾಸ್ತ್ರದಲ್ಲಿ ಪಿ.ಎಚ್.ಡಿ ಪಡೆದ ಮಂಗಳಾ ನಾರ್ಲಿಕರ್ ತಮ್ಮನ್ನು ಪಾರ್ಟ್‌ಟೈಮ್ ವಿಜ್ಞಾನಿ ಎಂದೇ ಕರೆದುಕೊಳ್ಳುತ್ತಾರೆ.

## ಬದಲಾದ ಕಾಲ


ದೀಪ್ತಿ ಹೆಬ್ಬಾಲೆ

ಇಂದು ದೇಶಾದ್ಯಂತ ಇರುವ 62 ಪ್ರಮುಖ ವೈಜ್ಞಾನಿಕ ಸಂಸ್ಥೆಗಳಲ್ಲಿ ಬೆರಳೆಣಿಕೆಯಷ್ಟು ಮಹಿಳಾ ನಿರ್ದೇಶಕರು ಸಿಗುತ್ತಾರೆ. ಅವರಲ್ಲಿ 1996 ರಲ್ಲಿ  ಶಾಂತಿಸ್ವರೂಪ ಭಟ್ನಾಗರ್ ಪ್ರಶಸ್ತಿ ಪಡೆದ ಡಾ. ವಿಜಯಲಕ್ಷ್ಮೀ ರವೀಂದ್ರನಾಥ್ ಪ್ರಮುಖರು. ಪ್ರಯೋಗ ಶಾಲೆಗಳಲ್ಲಿ ವಿಶೇಷವಾಗಿ ಜೀವ ವಿಜ್ಞಾನದ ಪ್ರಯೋಗಶಾಲೆಗಳಲ್ಲಿ ನಾವು ಯುವ ಮಹಿಳಾ ವಿಜ್ಞಾನಿಗಳನ್ನು ಹೆಚ್ಚಾಗಿ ನೋಡಬಹುದಾಗಿದೆ. ಇವರು ಮುಂದೆ  ಉನ್ನತ ಸ್ಥಾನಗಳಲ್ಲಿ ಕಂಡುಬರುವುದಿಲ್ಲ. ಬಹುಶಃ ನಾವು ಕ್ರಮಿಸಬಹುದಾದ ಹಾದಿ ಇನ್ನೂ ಬಹಳ ಇದೆ ಎನ್ನುತ್ತಾರೆ ಭಾರತೀಯ ವಿಜ್ಞಾನ ಮಂದಿರದ ಡಾ. ಸಂಧ್ಯಾವಿಶ್ವನಾಥ್.

ಇದೇ ಸಂಸ್ಥೆಯಲ್ಲಿ ಸಂಶೋಧನೆ ಮಾಡುತ್ತಿರುವ ದೀಪ್ತಿ ಹೆಬ್ಬಾಲೆ ಸಮುದ್ರದ ಪಾಚಿಗಳಿಂದ ಜೈವಿಕ ಇಂಧನ ಪಡೆಯುವ ಸಂಶೋಧನೆಗಾಗಿ ಮನೆಯಿಂದ ಹೆಚ್ಚುಕಾಲ ಹೊರಗುಳಿಯ ಬೇಕಾಗುತ್ತದೆ. ಆದರೆ ಅದಕ್ಕೆ ನನಗೆ ನನ್ನ ತಾಯಿ ತಂದೆಯರ ಸಂಪೂರ್ಣ ಬೆಂಬಲವಿದೆ ಎನ್ನುತ್ತಾರೆ. ಹಾಗೆಯೆ ಗೌರಿ ಕುಲಕರ್ಣಿ, ರಶ್ಮಿ ಪುಣ್ಯ ಮುಂತಾದವರು ಹೊಸ ಪೀಳಿಗೆಯ ಸಂಶೋಧಕಿಯರು. ನಗರದ ಭಾರತಿಯ ವಿಜ್ಞಾನ ಮಂದಿರದ ಆವರಣದಲ್ಲಿ ಒಂದು ಸುತ್ತು ಹಾಕಿದರೆ ಹಲವರು ನಮಗೆ ಸಿಗುತ್ತಾರೆ. ಆದರೆ ಅಂಕಿಅಂಶಗಳತ್ತ ಕಣ್ಣು ಹಾಯಿಸಿದರೆ ಇನ್ನೂ ಕಾಲ ಬದಲಾಗಬೇಕಿದೆ ಎನಿಸುತ್ತದೆ. ತೊಂಭತ್ತರ ದಶಕದಲ್ಲಿ ಲೇಖಕಿ  ಸಂಶೋಧನೆಯನ್ನು ಆಯ್ದು ಕೊಳ್ಳಬಯಸಿದಾಗ ಇದ್ದ  ಸವಾಲುಗಳು ಈಗಿಲ್ಲವಾದರೂ, ಅವಕಾಶಗಳು ಹೆಚ್ಚಾಗಿವೆಯಾದರೂ, ಮಹಿಳೆಯ 20ರಿಂದ 30 ವರ್ಷಗಳ ನಡುವಿನ ಅವಧಿಯ ವೃತ್ತಿ ಮತ್ತು ಬದುಕಿನ ನಡುವಿನ ಆಯ್ಕೆಯ ಸವಾಲು ಬದಲಾಗಿಲ್ಲ. ನಂತರದಲ್ಲಿ ಎಲ್ಲವೂ ಸರಿಯಾಗಿದೆ ಎನ್ನಿಸಿದರೂ ಕಣ್ಣಿಗೆ ಕಾಣದ ಗಾಜಿನ ಗೋಡೆ ಇನ್ನೂ ಮರೆಯಾಗಿಲ್ಲ ಎಂದೇ ಹೇಳಬಹುದಾಗಿದೆ.

ಸಮಾಧಾನದ ಅಂಶವೆಂದರೆ ಭಾರತೀಯ ಮಹಿಳಾ ವಿಜ್ಞಾನಿಗಳನ್ನು ಇಂದು ಸಮಾಜ ಗುರುತಿಸುತ್ತಿದೆ. ಇಸ್ರೋದ ಒಟ್ಟು ವಿಜ್ಞಾನಿಗಳಲ್ಲಿ ಶೇ. 20ರಷ್ಟು ಮಾತ್ರವಿದ್ದರೂ ಅವರ ಸಾಧನೆಯನ್ನು ಇಂದು ಜಗತ್ತು ಗುರುತಿಸಿದೆ. ದೇಶದ ಪ್ರಗತಿಯಲ್ಲಿ ವಿಜ್ಞಾನದ ಕೊಡುಗೆ ಮಹತ್ತರವಾದುದು, ರಾಷ್ಟದ ಪ್ರಗತಿಗಾಗಿ ಮಹಿಳೆಯರ ಕೊಡುಗೆಯನ್ನು ಗಮನಿಸುವಾಗ ಮಹಿಳಾ ವಿಜ್ಞಾನಿಗಳ ಪಾತ್ರ ಪ್ರಮುಖವಾಗುತ್ತದೆ. ಆ ನಿಟ್ಟಿನಲ್ಲಿ ಮಹಿಳಾ ವಿಜ್ಞಾನಿಗಳ ಸಾಧನೆ ಸವಾಲುಗಳನ್ನು ಅವಲೋಕಿಸುವ ಪ್ರಯತ್ನ ಇಲ್ಲಿದೆ. ನಾವು ಕ್ರಮಿಸಬೇಕಾದ ಹಾದಿ ಇನ್ನೂ ದೂರವಿದೆ ಎನ್ನುವುದು ಹಲವು ಮಹಿಳಾ ವಿಜ್ಞಾನಿಗಳ ಅಭಿಪ್ರಾಯ. ಅಂಕಿ ಅಂಶಗಳೂ ಅದನ್ನೇ ಸಾಬೀತು ಪಡಿಸುತ್ತವೆ.

(ವಿಜ್ಞಾನ ಲೇಖಕರು, ಬೆಂಗಳೂರು)
(ಪ್ರತಿಕ್ರಿಯಿಸಿ: s.mummigatti@gmail.com, feedback@vijayavani.in)

### ವಿಜ್ಞಾನ ಶಿಕ್ಷಣದಲ್ಲಿ ಮಹಿಳೆಯರು

- » ಶೇ. 80.45ರಷ್ಟು ಜೈವಿಕ ವಿಜ್ಞಾನ
- » ಶೇ.65 ವಿಜ್ಞಾನ, ಇಂಜಿನಿಯರಿಂಗ್
- » ಶೇ.42.5 ಪೋಸ್ಟ್ ಗ್ರಾಜುಯೇಶನ್
- » ಶೇ.37.2 ಪಿ. ಎಚ್.ಡಿ

ಆಧಾರ; ಇಂಡಿಯನ್ ನ್ಯಾಶನಲ್ ಸೈನ್ಸ್ ಅಕಾಡಮಿಯ ಅಧ್ಯಯನ ವರದಿ - 2004

### ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ವಿಜ್ಞಾನಿಗಳು

- » ಶೇ.21 ವಿಜ್ಞಾನ, ತಂತ್ರಜ್ಞಾನ ವಿಭಾಗ
- » ಶೇ.10 ಡಿ.ಆರ್.ಡಿ.ಒ
- » ಶೇ.17 ಅಟೊಮಿಕ್ ಎನರ್ಜಿ ವಿಭಾಗ
- » ಶೇ.7 ಐ.ಐ.ಎಸ್.ಸಿ
- » ಶೇ.6 ಫೆಲೊಸ್ ನ್ಯಾಷನಲ್ ಅಕಾಡಮಿ ಆಫ್ ಸೈನ್ಸ್‌ಸ್
- » ಶೇ.4 ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡಮಿ
- » ಶೇ.5 ಇಂಡಿಯನ್ ಅಕಾಡಮಿ ಆಫ್ ಸೈನ್ಸ್‌ಸ್

### ಸಾಧಕಿಯರು- ಸವಾಲುಗಳು

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು ಹಿಂದಿರುವುದು ಇಡಿಯ ಜಗತ್ತಿನಲ್ಲಿ ಇದು ಸಾಮಾನ್ಯ ವಿದ್ಯಮಾನ. ಆದರೂ ದೇಶದ ಒಟ್ಟೂ ಜನ ಸಂಖ್ಯೆಯ ಅರ್ಧದಷ್ಟಿರುವ ಭಾರತೀಯ ಮಹಿಳೆಯರು ಈ ವಿಭಾಗದಲ್ಲಿ ತಮ್ಮ ಕೊಡುಗೆಯನ್ನು ಸಲ್ಲಿಸುವುದು ಅತಿ ಮುಖ್ಯವಾದ ಅಂಶವಾಗಿದೆ. ಭಾರತದ ಸ್ವಾತಂತ್ರ್ಯಪೂರ್ವ ಮತ್ತು ಸ್ವತಂತ್ರ ಭಾರತದ ಅರಂಭದ ದಿನಗಳಲ್ಲಿ ಮಹಿಳೆಯರು ವಿದ್ಯಾಭ್ಯಾಸ ಮಾಡುವುದೇ ಒಂದು ಸವಾಲಾಗಿದ್ದ ದಿನಗಳಲ್ಲಿಯೂ ಕೇರಳದ ಜಾನಕಿ ಅಮ್ಮಾಳ್, ಕೋಲ್ಕತ್ತಾದ ಅಸಿಮಾ ಚಟರ್ಜಿ, ಮುಂಬಯಿಯ ಆನಂದಿಬಾಯಿ ಜೋಶಿ, ಐರಾವತಿ, ಅನ್ನಾಮಣಿ, ಕಮಲ್ ಸಮರ್ಥ್, ಹೀಗೆ ಹತ್ತುಹಲವರ ಹೆಸರುಗಳು ಪ್ರಮುಖವಾಗಿ ಕಂಡುಬರುತ್ತವೆ. ಇಂಡಿಯನ್ ಅಕಾಡಮಿ ಆಫ್ ಸೈನ್ಸ್ ಪ್ರಕಟಿಸಿರುವ ‘ಲೀಲಾವತಿಸ್ ಡಾಟರ್ಸ್’ ಎಂಬ ಪುಸ್ತಕದಲ್ಲಿ ನೂರು ಭಾರತೀಯ ಮಹಿಳಾ ವಿಜ್ಞಾನಿಗಳ ಜೀವನಗಾಥೆಯನ್ನುನೋಡಬಹುದಾಗಿದೆ. ಇವರಲ್ಲಿ ಬಹಳಷ್ಟು ಮಹಿಳೆಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆಯನ್ನು ಮಾಡಿದ್ದವರು. ಮೊದಲು ಮದುವೆ, ನಂತರ ಬಸಿರು ಬಾಣಂತನ ಮಗುವಿನ ಅರೈಕೆಗಳು ಆಕೆಯನ್ನು ಮನೆಗೆ ಕಟ್ಟಿ ಹಾಕಿದರೆ, ಇವೆಲ್ಲವುಗಳಿಂದ ಮುಕ್ತನಾದ ಪುರುಷ ವಿಜ್ಞಾನಿ ಮುಂದುವರಿಯುದು ಸುಲಭ ಸಾಧ್ಯವಾಗಿತ್ತು. ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ಸವಲತ್ತುಗಳು ಆಕೆಯ ಮನೆಗೆಲಸವನ್ನು ಹಗುರವಾಗಿಸಿವೆ. ಮಗುವಿನ ಪಾಲನೆಗೆ ಸಹಾಯ ದೊರೆಯುತ್ತಿದೆ. ಆದರೂ ಏಕೆ ಮಹಿಳೆ ಇನ್ನೂ ಹಿಂದಿದ್ದಾಳೆ ಎನ್ನುವುದು ಕುತೂಹಲದ ವಿಷಯ.


ಅಸಿಮಾ ಚಟರ್ಜಿ